ಯಾರು ಅಲ್ಲಾಹನೊಂದಿಗೆ ಏನನ್ನೂ ಸಹಭಾಗಿತ್ವ (ಶಿರ್ಕ್) ಮಾಡದೆ ಅವನನ್ನು ಭೇಟಿಯಾಗುತ್ತಾರೋ, (ಅವರು ಮಾಡಿದ) ಪಾಪವು ಅವರಿಗೆ ಹಾನಿಯುಂಟುಮಾಡುವುದಿಲ್ಲ. ಯಾರು ಅವನೊಂದಿಗೆ ಸಹಭಾಗಿತ್ವ (ಶಿರ್ಕ್) ಮಾಡುತ್ತಾ ಮರಣ ಹೊಂದುತ್ತಾರೋ, (ಅವರು ಮಾಡಿದ) ಸತ್ಕರ್ಮವು ಅವರಿಗೆ ಪ್ರಯೋಜನ ನೀಡುವುದಿಲ್ಲ

ಅಬ್ದುಲ್ಲಾ ಇಬ್ನ್ ಅಮ್ರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರು ಅಲ್ಲಾಹನೊಂದಿಗೆ ಏನನ್ನೂ ಸಹಭಾಗಿತ್ವ (ಶಿರ್ಕ್) ಮಾಡದೆ ಅವನನ್ನು ಭೇಟಿಯಾಗುತ್ತಾರೋ, (ಅವರು ಮಾಡಿದ) ಪಾಪವು ಅವರಿಗೆ ಹಾನಿಯುಂಟುಮಾಡುವುದಿಲ್ಲ. ಯಾರು ಅವನೊಂದಿಗೆ ಸಹಭಾಗಿತ್ವ (ಶಿರ್ಕ್) ಮಾಡುತ್ತಾ ಮರಣ ಹೊಂದುತ್ತಾರೋ, (ಅವರು ಮಾಡಿದ) ಸತ್ಕರ್ಮವು ಅವರಿಗೆ ಪ್ರಯೋಜನ ನೀಡುವುದಿಲ್ಲ."
[صحيح] [رواه أحمد]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸಿರುವುದೇನೆಂದರೆ, ಯಾರು ಏಕದೇವಾರಾಧಕನಾಗಿ, ಅಲ್ಲಾಹನೊಂದಿಗೆ ಏನನ್ನೂ ಸಹಭಾಗಿತ್ವ (ಶಿರ್ಕ್) ಮಾಡದೆ ಮರಣಹೊಂದಿ ಅಲ್ಲಾಹನನ್ನು ಭೇಟಿಯಾಗುತ್ತಾನೋ, ಅವನು ಸ್ವರ್ಗವಾಸಿಗಳಲ್ಲಿ ಸೇರಿದವನಾಗುತ್ತಾನೆ; ಒಂದು ವೇಳೆ ಅವನು ಮಾಡಿದ ಪಾಪಕ್ಕಾಗಿ ಅವನಿಗೆ ನರಕದಲ್ಲಿ (ತಾತ್ಕಾಲಿಕವಾಗಿ) ಶಿಕ್ಷೆಯಾದರೂ ಸರಿ (ಕೊನೆಗೆ ಸ್ವರ್ಗ ಸೇರುತ್ತಾನೆ). ಯಾರು ಅಲ್ಲಾಹನೊಂದಿಗೆ ಏನನ್ನಾದರೂ ಸಹಭಾಗಿತ್ವ ಮಾಡುತ್ತಾ (ಶಿರ್ಕ್ ಮಾಡುತ್ತಾ) ಮರಣ ಹೊಂದುತ್ತಾನೋ, ಆ ಶಿರ್ಕ್ನೊಂದಿಗೆ ಅವನ ಸತ್ಕರ್ಮವು ಅವನಿಗೆ ಪ್ರಯೋಜನ ನೀಡುವುದಿಲ್ಲ; ಮತ್ತು ಸ್ವರ್ಗವು ಅವನ ಪಾಲಿಗೆ ನಿಷಿದ್ಧವಾಗಿದೆ (ಹರಾಮ್).

https://sunnah.global/hadeeth/kn/show/65109